(ಇಂದು ದಿಃ 23-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ವಾಟೀ ಸವಾಲು :- ಶ್ರೀ.SKD ವಕೀಲರಿಂದ :-**

ಭೀಮಶಪ್ಪ ತಂದೆ ತಮ್ಮಪ್ಪ ರವರಿಗೆ ವೆಂಕಟರಾಮುಲು ಮಗ ಮತ್ತು ಹುಸೇಂತಪ್ಪ ಮತ್ತು ಭೀಮಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಸಣ್ಣ ಭೀಮಪ್ಪನಿಗೆ ಬಾಲಪ್ಪ, ಬಸಪ್ಪ, ತಮ್ಮಪ್ಪ, ಹಣಮಂತು 4 ಜನ ಮಕ್ಕಳು ಎಂದರೆ ಸರಿ. ಬಾಲಪ್ಪ ತಂದೆ ಭೀಮಪ್ಪನಿಗೆ ನರಸಪ್ಪ ಮತ್ತು ಚಂದ್ರಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ಚಂದ್ರಪ್ಪನಿಗೆ ಹಣಮಂತು ಮಗ ಎಂದರೆ ಸರಿ. 2ನೇ ಪ್ರತಿವಾದಿ ನರಸಮ್ಮ ಸದರಿ ಹಣಮಂತುನ ಹೆಂಡತಿ ಎಂದರೆ ಸರಿ. 2ನೇ ಪ್ರತಿವಾದಿ ಮತ್ತು ಹಣಮಂತನಿಗೆ ಭೀಮಪ್ಪ ಮತ್ತು ಸರೋಜ ಇಬ್ಬರು ಮಕ್ಕಳು ಎಂದರೆ ಸರಿ. ಬಾಲಪ್ಪನ ಮಗ ನರಸಪ್ಪನಿಗೆ 1ನೇ ಪ್ರತಿವಾದಿ, ಭೀಮಮ್ಮ ಮತ್ತು ಸತ್ಯಮ್ಮ ಮಕ್ಕಳು ಎಂದರೆ ಸರಿ. ನಾನು ವಾದ ಪತ್ರದ 3ನೇ ಪ್ಯಾರಾದಲ್ಲಿ ತೋರಿಸಿರುವ ವಂಶಾವಳಿ ಸುಳ್ಳು ಎಂದರೆ ಸರಿಯಲ್ಲ.

ಸಾಯಣ್ಣನ ಮಕ್ಕಳಾದ ದೊಡ್ಡಭೀಮಪ್ಪ ಮತ್ತು ಸಣ್ಣ ಭೀಮಪ್ಪ ರವರ ಮಕ್ಕಳುಗಳ ನಡುವೆ ಯಾರ ಯಾರ ನಡುವೆ ಯಾವಾಗ ಯಾವಾಗ ಭಾಗ ಆಗಿತ್ತು ನನಗೆ ಗೊತ್ತಿಲ್ಲ. ಸಾಯಣ್ಣನ ಕುಟುಂಬಕ್ಕೆ ಒಟ್ಟು 48 ಎಕರೆ ಜಮೀನು ಇತ್ತು. ಭಾಗ ಆದ ಬಗ್ಗೆ ದಾಖಲಾತಿ ನಾನು ನೋಡಿಲ್ಲ. ಭಾಗದ ಪ್ರಕಾರ ಅವರವರ ಹೆಸರಿಗೆ ಪಹಣಿ ಬಂದಿದೆ ಅಥವಾ ಇಲ್ಲ ನನಗೆ ಗೊತ್ತಿಲ್ಲ. ನಾನು ಪಹಣಿ ನೋಡಲು ಹೋಗಿಲ್ಲ. ಸರ್ವೆ ನಂಬರ 12 ರಲ್ಲಿ 7 ಎಕರೆ 23 ಗುಂಟೆ ಜಮೀನು ದೊಡ್ಡ ಭೀಮಪ್ಪನ ಭಾಗಕ್ಕೆ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡ ಭೀಮಪ್ಪ, ಹಣಮಪ್ಪ ಮತ್ತು ನರಸಪ್ಪ ಎಷ್ಟು ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನಾನು ಸರ್ವೆ ನಂಬರ 12 ರ ಪಹಣಿ ನೋಡಿಲ್ಲ. ಪಹಣಿಗಳಲ್ಲಿ ವಿಸ್ತೀರ್ಣ ವ್ಯತಾಸ ಆಗಿದೆ ಎಂದು ನಾನು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿಲ್ಲ. ನಮ್ಮ ಮತ್ತು ಪ್ರತಿವಾದಿಗೆ ನಡುವೆ ಸ್ವತ್ತಿನ ಗಡಿರೇಖೆ ಸಂಬಂಧ ತಕರಾರು ಇದೆ. ನಮ್ಮ ನಡುವೆ ಪಹಣಿಗಳಲ್ಲಿ ವಿಸ್ತೀರ್ಣ ಹೆಚ್ಚು ಕಡಿಮೆ ಆಗಿದೆ ಎಂದು ನಾನು ಸರ್ವೆ ಇಲಾಖೆಗೆ ಅರ್ಜಿ ಕೊಟ್ಟಿಲ್ಲ. ಭೀಮಪ್ಪ ತಂದೆ ನರಸಪ್ಪ 2 ಎಕರೆ 28 ಗುಂಟೆಗೆ ಮಾಲಿಕರು ಎಂದರೆ ಸರಿ. ನರಸಮ್ಮ ಗಂಡ ಹಣಮಂತು ರವರಿಗೆ 2 ಎಕರೆ 21 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಪಹಣಿಗಳಲ್ಲಿ ವಿಸ್ತೀರ್ಣ ವ್ಯತ್ಯಾಸ ಆಗಿದೆ ಎಂದು ಹೇಳುತ್ತಾರೆ. ವೆಂಕಟಪ್ಪರಾಮುಲು ತಂದೆ ಭೀಮಪ್ಪ ರವರಿಗೆ 4 ಎಕರೆ 18 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮಿನಿಗೆ ಆತ ಮಾಲಿಕ ಮತ್ತು ಕಬ್ಜಾದಾರ ಎಂದರೆ ಸರಿ.

ದಾವಾ ಜಮೀನು ನರಡೆಪಾಡಲ್ಲಿದೆ ಎಂದರೆ ಸರಿ. ಪಹಣಿಯಲ್ಲಿ ನನ್ನ ಹೆಸರಿಗೆ 5 ಎಕರೆ ಚಿಲ್ಲರೆ ಜಮೀನು ಬರುತ್ತಿದೆ. ಆದರೆ ನನ್ನ ಹೆಸರಿಗೆ 7 ಎಕರೆ ಚಿಲ್ಲರೆ ಜಮೀನು ಬರಬೇಕು. ನನಗೆ 7 ಎಕರೆ

ಚಿಲ್ಲರೆ ಜಮೀನು ಬರಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 7 ಎಕರೆ 23 ಗುಂಟೆ ಜಮಿನಿಗೆ ಮಾಲಿಕರು ಮತ್ತು ಕಬ್ಜಾದಾರರು ಅಲ್ಲ ಎಂದರೆ ಸರಿಯಲ್ಲ. ನಾನು 4 ಎಕರೆ 39 ಗುಂಟೆ ಜಮಿನೀಗೆ ಮಾತ್ರ ಮಾಲಿಕಳು ಮತ್ತು ಕಬ್ಜಾದರರು ಎಂದರೆ ಸರಿಯಲ್ಲ. ಪಹಣಿಯಲ್ಲಿ ತೋರಿಸಿರುವಂತೆ ಸರ್ವೆ ನಂಬರ 12 ರಲ್ಲಿ ಎಲ್ಲರು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಪಹಣಿಯಲ್ಲಿ ತೋರಿಸಿರುವ ವಿಸ್ತಿರ್ಣದಲ್ಲಿ ಅವರವರ ಹೆಸರಿಗೆ ತೋರಿಸಿರುವ ಜಮೀನುಗಳಲ್ಲಿ ಅವರವರು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಪಹಣಿಗಳಲ್ಲಿ ವಿಸ್ತಿರ್ಣ ತಪ್ಪಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ, ಉತ್ತರಕ್ಕೆ, ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಯಾವ ಸರ್ವೆ ನಂಬರಗಳು ಇವೆ ಎಂದು ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮಕ್ಕೆ ಪ್ರತಿವಾದಿಯರ ಜಮೀನು ಇದೆ. ದಕ್ಷಿಣಕ್ಕೆ ಭೀಮಪ್ಪ ಮತ್ತು ಉತ್ತರಕ್ಕೆ ನರಸಪ್ಪ ರವರ ಜಮೀನುಗಳು ಇವೆ. ನಾನು ಮೇಲೆ ಹೇಳಿದಂತೆ ನನ್ನ ದಾವೆಯಲ್ಲಿ ಚೆಕಬಂದಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ಇಲಾಖೆಗೆ ಅರ್ಜಿ ಕೊಟ್ಟಿಲ್ಲ ಆದರೆ ನನ್ನ ಗಂಡ ಕೊಟ್ಟಿದ್ದರು. ಅವರು ಅರ್ಜಿ ಕೊಟ್ಟಾಗ ನನಗೆ ಗೊತ್ತಾಗಿದೆ. ನನ್ನ ಗಂಡ ಕೊಟ್ಟ ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಪಹಣಿಗಳಲ್ಲಿ ವಿಸ್ತಿರ್ಣ ವ್ಯತ್ಯಾಸ ಆಗಿದ್ದು ಅದನ್ನು ಸರಿ ಮಾಡಿಕೊಳ್ಳಲು ಸಹಕಾರ ಕೊಡಿ ಎಂದು ನಾನು ಪ್ರತಿವಾದಿಯರನ್ನು ಈಗ 1 ವರ್ಷದ ಹಿಂದೆ ಕೇಳಿದ್ದೆ. ಅದಕ್ಕಿಂತ ಮುಂಚೆ ವಿಸ್ತಿರ್ಣ ವ್ಯತ್ಯಾಸ ಆಗಿರುವ ಸಂಗತಿ ಗೊತ್ತಿರಲಿಲ್ಲ ಕಾರಣ ಅದಕ್ಕಿಂತ ಮುಂಚೆ ಕೇಳಿಲ್ಲ. ಸುಮಾರು 60-70 ವರ್ಷಗಳಿಂದ ಪಹಣಿಗಳು ಒಂದೆ ರೀತಿ ಬರುತ್ತಿವೆ ಎಂದರೆ ಇರಬಹುದು. ಆದರೆ ವ್ಯತ್ಯಾಸ ಆಗಿರುವುದು ನನಗೆ ಈಗ ಗೊತ್ತಾಗಿದೆ ಎಂದು ಹೇಳುತ್ತಾರೆ. ನಾನು 7 ಎಕೆರೆ 23 ಗುಂಟೆಗೆ ಮಾಲಿಕರು ಮತ್ತು ಕಬ್ಜಾದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 12ಕ್ಕೆ ಸಂಬಂಧ ಪಟ್ಟಂತ ಇಲ್ಲಿಯರೆಗೆ ಆದಯಾವುದೇ ಮುಟೇಷನಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಸೇರಿದ ಜಮೀನಿನಲ್ಲಿನ ಸ್ವಲ್ಪ ಭಾಗ ನಾನು ತೆಗೆದುಕೊಂಡು ಅವರಿಗೆ ಕಡಿಮೆ ಜಮೀನು ಮಾಡಬೇಕೆಂಬ ಉದ್ದೇಶದಿದಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

OS No. 29/2021
PW-1

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**